ಸಿ. ಸಿ. ನಂ.- **328/2018**

ಪಿ.ಡಬ್ಲ್ಯೂ. 1

ಸಾಕ್ಷಿಯು ದಿನಾಂಕ- **20-06-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ಶ್ರೀ ಕೆ ವಾಯ್ ವಕೀಲರಿಂದ -

ನಿಪಿ 6 ಖಾತಾ ವಿವರದಲ್ಲಿ ಕಾಣುವಂತೆ ದಿಃ **10.02.2016** ರಂದು ನನ್ನ ಖಾತೆಗೆ ರೂ. 18 ಲಕ್ಷ ಜಮಾ ಆಗಿದ್ದು ಸದರಿ ಹಣ ಆರೋಪಿ ನನ್ನಿಂದ ಆಸ್ತಿಯನ್ನು ಖರೀದಿ ಮಾಡಿದಕ್ಕೆ ಪ್ರತಿಫಲ ಮೊತ್ತವನ್ನು ಕೊಡಲು ಬ್ಯಾಂಕ್ ನಲ್ಲಿ ಸಾಲ ಮಾಡಿದ್ದರಿಂದ ಬ್ಯಾಂಕ್ ನವರು ನೇರವಾಗಿ ಈ ಮೊತ್ತವನ್ನು ನನ್ನ ಖಾತೆಗೆ ಜಮಾ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ದಿಃ **10.02.2016** ರಂದು ನೇರವಾಗಿ ಬ್ಯಾಂಕ್ ನಿಂದ ನನ್ನ ಖಾತೆಗೆ ರೂ. 18 ಲಕ್ಷ ಬಂದಿದ್ದರಿಂದ, ಈ ಹಿಂದೆ ಆರೋಪಿ ನನಗೆ ಮುಂಗಡವಾಗಿ ಪ್ರತಿಫಲದ ಮೊತ್ತವನ್ನು ಸ್ವಲ್ಪ ಪ್ರಮಾಣದಲ್ಲಿ ಪಾವತಿ ಮಾಡಿದ್ದರಿಂದ, ರೂ 18 ಲಕ್ಷ ಬಂದ ನಂತರ ನಾನು ಲೆಕ್ಕಾಚಾರ ಮಾಡಿ ಆರೋಪಿ ಹೆಚ್ಚಾಗಿ ಪಾವತಿ ಮಾಡಿದ ರೂ. **5,41,000/-** ಮೊತ್ತವನ್ನು ದಿಃ **11.02.2016** ರಂದು ಚೆಕ್ ಮುಖಾಂತರ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಹಣದ ಅವಶ್ಯಕತೆ ಇದ್ದರಿಂದ **2016** ನೇ ಇಸವಿಯಲ್ಲಿ ನನ್ನ ಆಸ್ತಿಯನ್ನು ಆರೋಪಿಗೆ ಮಾರಾಟ ಮಾಡಿದ್ದೆ ಎಂದರೆ ಸರಿ.

ಆರೋಪಿಗೆ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನೇ ಹಣದ ಅವಶ್ಯಕತೆಗಾಗಿ ಅಸ್ತಿಯನ್ನು ಮಾರಾಟ ಮಾಡಿದ್ದರಿಂದ ಆರೋಪಿಗೆ ಸಾಲಕೊಡುವಷ್ಟ ಸಾಮರ್ಥ್ಯ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 7 ಅರ್.ಪಿ.ಎ.ಡಿ ಕವರ್ ನಲ್ಲಿ ಇರುವ ನೋಟಿಸ್ ನ್ನು ನಾನು ಆರೋಪಿಗೆ ಎಂದಿಗೂ ಕಳುಹಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಾಲ ಕೊಡದೆ ಇದ್ದರು ಈ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ತಪ್ಪು ದಾಖಲೆಗಳನ್ನು ತೋರಿಸಿ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ ದಂ.ಗಳು, ಹೊಸಪೇಟೆ.